ಜನಾರೋಗ್ಯ—ಛಂದಾಗಿವೆ; ಅಕ್ಟೋಬರ್ ತಿಂಗಳಲ್ಲಿ 596 ಮಂದಿಯೂ ಅದರ ಹಿಂದಿನ ತಿಂಗಳಲ್ಲಿ 644 ಮಂದಿಯೂ ಹೋಗಿರುತ್ತಾರೆ; ಮೊಕಾಬಿಲಾ 48 ಕಮ್ಮಿ. ಮುಖ್ಯವಾಗಿ ಜ್ವರದಿಂದಲೆ ಜನಗಳು ಸತ್ತಿರುತ್ತಾರೆ.

ಕಾಲ್ನಡೆ--ಆರೋಗ್ಯವಾಗಿವೆ, ಸದರೀ ಮಾಹೆಯಲ್ಲಿ 1795 ಕಾಲ್ನಡೆಗಳೂ ಅದರ ಹಿಂದಿನ ತಿಂಗಳಲ್ಲಿ 2465 ಕಾಲ್ನಡೆಗಳೂ ಹೋಗಿರುತ್ತವೆ; ಈ ಪೈಕೀ ದೃಷ್ಟಮೃಗಗಳಿಂದ ಕೊಲ್ಲಲ್ಪಟ್ಟವು 225.

ಜಮಿನು—ಸಾಗುವಳೀ ಬಗ್ಯೆ 1367—0—8 ರೂ. ಕಂದಾಯ ಬಾಳುವ ಜಮಿನು ತೆಗದುಕೊಳ್ಳಲ್ಪಟ್ಟಿತು.

ಎ. ಹೆಚ್. ಮೆಕ್ಕಿಟ್ಟೈರ್,
ಡೆಪ್ಯೂಟಿ ಕಮ್ಮಿಷನರ್.

ಕೊಡಗು.

ನೋಟೀಸ್‌ಗಳು.

ತಾರೀಖು 4ನೇ ಡಿಸಂಬರ್ ಸ್ಯ 1884.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಸ್ಯ 1885ನೇ ಜನವರೀ ತಾರೀಖು 1ರಿಂದ ಕೊಡಗು ಫಾರೆಸ್ಟುಗಳಲ್ಲಿ ಬಿದರುಗಳನ್ನು ಕಂದುಸಾವಿರಕ್ಕೆ 7—8—0 ವೀರೆ ಮಾರುತ್ತೀವೆ.

ಕೊಂಡುಕೊಳ್ಳುವವರು ಬಿದರುಗಳನ್ನು ತಾವೇ ಕಡಿದುಕೊಳ್ಳಬೇಕು.

ಬಿದರುಗಳು ಬೇಕಾದವರು ಫೈಜರ್‌ವೇಟೆ, ಮಾಲ್ದಾರೆ, ಮತ್ತು ತಿತಿಮತಿಯಲ್ಲಿ ಇರುವ ಫಾರೆಸ್ಟರವರಿಗೆ ದರಖಾಸ್ತು ಮಾಡಿಕೊಳ್ಳ ತಕ್ಕದ್ದಿದೆ.

ತಾರೀಖು 14ನೇ ಜನವರೀ ಸ್ಯ 1885.

ಕೊಡಗು ಫಾರೆಸ್ಟ್ ಇಲಾಖೆಯ ಬಾಬತು ಹುಣಸೂರು ಡಿಪೋದಲ್ಲಿರುವ ಈ ಕೆಳಗೆ ನಮೂದ್ ಮಾಡಿದ ನಾಟುಗಳನ್ನು ಇದೇ ಇಸವಿ ಫಿಬವರೀ ತಾರೀಖು 10ನೇ ದಿನ ಹುಣಸೂರಲ್ಲಿ ಬಹಿರಂಗವಾದ ಹರಾಜು ಮಾಡುತ್ತೀವೆ.

ತ್ಯಾಗ .. .. 400 ನಾಟುಗಳು. | ಹೊನ್ನೆ .. .. 200 ನಾಟುಗಳು

ನಿಬಂಧನೆ—ಸ್ಯ 1873ನೇ ಇಸವಿ ಮೈಸೂರು ಗೆಜಿಟ್ಟಿನಲ್ಲಿ ಪಾಯಿಷ್ ಮಾಡೋಣಾದ ಜೂ ತಾರೀಖು 12ನೇ ನಂಬರು 20ನೇ ನೋಟಿಫಿಕೇಷ್ಯ ವೀರೆ.

ಎಫ್. ಬಿ. ಡಿಕ್ಕೆನ್ಸ್,
ಡೆಪ್ಯೂಟೀ ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ್.

ತಾರೀಖು 6ನೇ ಡಿಸಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಸ್ಯ 1885ನೇ ಇಸವಿ ಫೆಬ್ರವರಿ ಗುರ್ವೇ ತಾರೀಖು ಲಾಗಾಯಿತು ಜೂ 30ನೇ ತಾರೀಖುವರೆಗೆ ಇದರಡಿ ಕಂಡ ಪ್ಲಾಂಟೇಷ್ಯಗಳು ಬೇಟೆಗೇ ಕಾಲಕ್ಕೋಸ್ಕರ ಮುಚ್ಚಲ್ಪಡುತವೆ ಬೇಟೆಗಾರರು ಪ್ಲಾಂಟೇಷ್ಯಗಳ ಚಾರ್ಜ್‌ನಲ್ಲಿರುವ ಫಾರೆಸ್ಟ್ಸುಆರ್ಫೆಟಿಸ್‌ಯವರ ವಿಶೇಷ ಅಪ್ಪಣೆಯಾಯಿ ಸದರೀ ಪ್ಲಾಂಟೇಷ್ಯಗಳನ್ನು ಪ್ರವೇಶಮಾಡಲು ಅವಕಾಶ ಕೊಡಲ್ಪಡುವದಿಲ್ಲ.

ಪ್ಲಾಂಟೇಷ್ಯಗಳು.		ತಾಲ್ಲೂಕು.
ಕಾಡಗೋಡಿ		ಹೊಸಕೋಟೆ
ಜಡಿಗೇನಹಳ್ಳಿ	(ಹಳೇದು ಮತ್ತು ಹೊಸದು)	ಡಿಟೋ
ನೆಲಾಲ್	(A. B. ವ C.)	ಡಿಟೋ
ತಟ್ಟೂರು		ಡಿಟೋ
ತಿಂಡಲ್		ಹೊಸಕೋಟೆ ಮತ್ತು ಮಾಲೂರು